**ಕರ್ನಾಟಕ ವಿಧಾನಸಭೆ**
**ಹದಿನಾರನೇ ವಿಧಾನಸಭೆ**
**ಎರಡನೇ ಅಧಿವೇಶನ**

# ಹಂಪಿ ವಿಶ್ವ ಪರಂಪರೆ ಪ್ರದೇಶ ನಿರ್ವಹಣಾ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ, 2023

**(2023ರ ವಿಧಾನಸಭೆಯ ವಿಧೇಯಕ ಸಂಖ್ಯೆ–27)**

ಹಂಪಿ ವಿಶ್ವ ಪರಂಪರೆ ಪ್ರದೇಶ ನಿರ್ವಹಣಾ ಪ್ರಾಧಿಕಾರ ಅಧಿನಿಯಮ, 2002ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಹಂಪಿ ವಿಶ್ವ ಪರಂಪರೆ ಪ್ರದೇಶ ನಿರ್ವಹಣಾ ಪ್ರಾಧಿಕಾರ ಅಧಿನಿಯಮ, 2002 (2003ರ ಕರ್ನಾಟಕ ಅಧಿನಿಯಮ 18)ನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತಾನ್ನಾಲ್ಕನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಹಂಪಿ ವಿಶ್ವ ಪರಂಪರೆ ಪ್ರದೇಶ ನಿರ್ವಹಣಾ ಪ್ರಾಧಿಕಾರ (ತಿದ್ದುಪಡಿ) ಅಧಿನಿಯಮ, 2023 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆಬರತಕ್ಕದ್ದು.

**2. 3ನೇ ಪ್ರಕರಣದ ತಿದ್ದುಪಡಿ.-** ಕರ್ನಾಟಕ ಹಂಪಿ ವಿಶ್ವ ಪರಂಪರೆ ಪ್ರದೇಶ ನಿರ್ವಹಣಾ ಪ್ರಾಧಿಕಾರ ಅಧಿನಿಯಮ, 2002 (2003ರ ಕರ್ನಾಟಕ ಅಧಿನಿಯಮ 18)ರ (ಇದರಲ್ಲಿ ಇನ್ನುಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) 3ನೇ ಪ್ರಕರಣದ (3)ನೇ ಉಪಪ್ರಕರಣದಲ್ಲಿ,-

(i) ಖಂಡ (ಎ)ರಲ್ಲಿ "ಜಿಲ್ಲಾಧಿಕಾರಿ, ಬಳ್ಳಾರಿ ಜಿಲ್ಲೆ" ಎಂಬ ಪದಗಳ ಬದಲಾಗಿ "ಜಿಲ್ಲಾಧಿಕಾರಿ, ವಿಜಯನಗರ ಜಿಲ್ಲೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ii) ಖಂಡ (ಸಿ)ಗೆ ಬದಲಾಗಿ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(ಸಿ) ಆಯುಕ್ತರು, ಪ್ರಾಚ್ಯವಸ್ತು, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರು."

(iii) ಖಂಡ (ಎಫ್)ಗೆ ಬದಲಾಗಿ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(ಎಫ್) ಸೂಪರಿಂಟೆಂಡೆಂಟ್ ಆಫ್ ಪೊಲೀಸ್, ವಿಜಯನಗರ ಜಿಲ್ಲೆ."

(iv) ಖಂಡ (ಹೆಚ್)ಗೆ ಬದಲಾಗಿ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(ಎಚ್) ಅಧೀಕ್ಷಕ ಪುರಾತತ್ವಜ್ಞ, ಭಾರತ ಪುರಾತತ್ವ ಸರ್ವೇಕ್ಷಣೆ, ಹಂಪಿ ವೃತ್ತ, ಕಮಲಾಪುರ."

(v) ಖಂಡ (ಐ) ಯನ್ನು ಬಿಟ್ಟುಬಿಡತಕ್ಕದ್ದು;

(vi) ಖಂಡ (ಜೆ)ಗೆ ಬದಲಾಗಿ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(ಜೆ) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ವಿಜಯನಗರ ಜಿಲ್ಲೆ."

(vii) ಖಂಡ (ಎಲ್)ಗೆ ಬದಲಾಗಿ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(ಎಲ್) ಅರಣ್ಯ ಉಪ ಸಂರಕ್ಷಕ, ವಿಜಯನಗರ ಜಿಲ್ಲೆ."; ಮತ್ತು

(viii) ಖಂಡ (ಪಿ)ಗೆ ಬದಲಾಗಿ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(ಪಿ) ಪರಿಸರ ಅಧಿಕಾರಿ, ವಿಜಯನಗರ ಜಿಲ್ಲೆ."

**3. 6ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 6ನೇ ಪ್ರಕರಣದಲ್ಲಿನ (3)ನೇ ಉಪಪ್ರಕರಣದಲ್ಲಿ,-

(i) ಖಂಡ (ಎಎ)ರಲ್ಲಿರುವ "ಬಳ್ಳಾರಿ ಜಿಲ್ಲೆಯ ಪ್ರಭಾರದಲ್ಲಿರುವ ಸಚಿವರು" ಎಂಬ ಪದಗಳ ಬದಲಾಗಿ "ವಿಜಯನಗರ ಜಿಲ್ಲೆಯ ಪ್ರಭಾರದಲ್ಲಿರುವ ಸಚಿವರು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ii) ಖಂಡ (ಬಿ)ರಲ್ಲಿರುವ "ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪ್ರಭಾರದಲ್ಲಿರುವ ಸಚಿವರು" ಎಂಬ ಪದಗಳ ಬದಲಾಗಿ "ನಗರಾಭಿವೃದ್ಧಿ ಇಲಾಖೆಯ ಪ್ರಭಾರದಲ್ಲಿರುವ ಸಚಿವರು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು; ಮತ್ತು

(iii) ಖಂಡ (ಎಫ್)ರಲ್ಲಿರುವ "ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪ್ರಭಾರದಲ್ಲಿರುವ ಸರ್ಕಾರದ ಕಾರ್ಯದರ್ಶಿ" ಎಂಬ ಪದಗಳಿಗೆ ಬದಲಾಗಿ "ನಗರಾಭಿವೃದ್ಧಿ ಇಲಾಖೆಯ ಪ್ರಭಾರದಲ್ಲಿರುವ ಸರ್ಕಾರದ ಕಾರ್ಯದರ್ಶಿ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**4. 11ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 11ನೇ ಪ್ರಕರಣದಲ್ಲಿನ (1)ನೇ ಉಪಪ್ರಕರಣದ (i), (ii), (iii), (iv), (v) ಮತ್ತು (viii)ನೇ ಖಂಡಗಳಲ್ಲಿ "ಅಭಿವೃದ್ಧಿ ಯೋಜನೆ" ಎಂಬ ಪದಗಳು ಬರುವ ಕಡೆಗಳಲೆಲ್ಲಾ "ಮಾಸ್ಟರ್ ಪ್ಲಾನ್" ಎಂಬ ಪದಗಳನ್ನು ಪ್ರತ್ಯಯಗಳೊಂದಿಗೆ ಪ್ರತಿಯೋಜಿಸತಕ್ಕದ್ದು.

**5. 23ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 23ನೇ ಪ್ರಕರಣದಲ್ಲಿನ (1)ನೇ ಉಪಪ್ರಕರಣದಲ್ಲಿ "ಅಭಿವೃದ್ಧಿ ಯೋಜನೆಗಳು" ಎಂಬ ಪದಗಳಿಗೆ ಬದಲಾಗಿ "ಮಾಸ್ಟರ್ ಪ್ಲಾನ್" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**6. 36ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 36ನೇ ಪ್ರಕರಣದಲ್ಲಿನ (3)ನೇ ಉಪಪ್ರಕರಣವನ್ನು ಬಿಟ್ಟುಬಿಡತಕ್ಕದ್ದು.

**7. ಅನುಸೂಚಿಯ ತಿದ್ದುಪಡಿ.-** ಮೂಲ ಅಧಿನಿಯಮದ ಅನುಸೂಚಿಯಲ್ಲಿನ,-

(i) ಭಾಗ-ಬಿ ಮತ್ತು ಭಾಗ-ಸಿ ಬದಲಾಗಿ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

**"ಭಾಗ-ಬಿ**

**ರಕ್ಷಾ ವಲಯ**

ಕೋರ್ ಪ್ರದೇಶ ವಲಯದ ಪರಿಮಿತಿಗಳಿಂದಾಚೆಗೆ ಎಲ್ಲಾ ಪಕ್ಕಗಳಲ್ಲೂ 1 ಕಿ.ಮೀ ವರೆಗೆ ವಿಸ್ತರಿಸಿದ 53.15 ಚ.ಕಿ.ಮೀ ಪ್ರದೇಶ.

**"ಭಾಗ-ಸಿ**

**ಹೊರ ಪ್ರದೇಶ ವಲಯ**

ರಕ್ಷಾ ಪ್ರದೇಶ ವಲಯದ ಪರಿಮಿತಿಗಳಿಂದಾಚೆಗೆ ಎಲ್ಲಾ ಪಕ್ಕಗಳಲ್ಲೂ 1 ಕಿ.ಮೀ ವರೆಗೆ ವಿಸ್ತರಿಸಿದ ಮತ್ತು 141.51 ಚ.ಕಿ.ಮೀ ಪ್ರದೇಶ.

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ವಿಜಯನಗರ ಹೆಸರಿನ ಹೊಸ ಜಿಲ್ಲೆಯನ್ನು ರಚಿಸಲಾಗಿದೆ. ಆದ್ದರಿಂದ,-

(i) ಪ್ರಾಧಿಕಾರವು ಸುಗಮವಾಗಿ ಮತ್ತು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು; ಮತ್ತು

(ii) ಯೋಜಿತ ಅಭಿವೃದ್ಧಿಯನ್ನು ಕಾರ್ಯಗತಗೊಳಿಸಲು,

- ಹಂಪಿ ವಿಶ್ವ ಪರಂಪರೆ ಪ್ರದೇಶ ನಿರ್ವಹಣಾ ಪ್ರಾಧಿಕಾರ ಅಧಿನಿಯಮ, 2002 (2003ರ ಕರ್ನಾಟಕ ಅಧಿನಿಯಮ 18)ನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಅಗತ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ, ಈ ವಿಧೇಯಕ.

.

## ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

**ಬಿ.ಎಸ್ ಸುರೇಶ್**
ನಗರಾಭಿವೃದ್ಧಿ ಮಂತ್ರಿಗಳು

**ಎಂ.ಕೆ. ವಿಶಾಲಾಕ್ಷಿ**
ಕಾರ್ಯದರ್ಶಿ
ಕರ್ನಾಟಕ ವಿಧಾನಸಭೆ

## ಅನುಬಂಧ

## ಕರ್ನಾಟಕ ಹಂಪಿ ವಿಶ್ವ ಪರಂಪರೆ ಪ್ರದೇಶ ನಿರ್ವಹಣಾ ಪ್ರಾಧಿಕಾರ ಅಧಿನಿಯಮ, 2002

## (2002ರ ಕರ್ನಾಟಕ ಅಧಿನಿಯಮ 18)ರ ಉದ್ಧೃತ ಭಾಗ

**XX XX XX**

**3. ಪ್ರಾಧಿಕಾರವನ್ನು ರಚಿಸುವುದು ಮತ್ತು ನಿಗಮಿತಗೊಳಿಸುವುದು.-** (1) ಈ ಅಧಿನಿಯಮದ ಉದ್ದೇಶಕ್ಕಾಗಿ, ಗೊತ್ತುಪಡಿಸಿದ ದಿನಾಂಕದ ತರುವಾಯ ಆದಷ್ಟುಬೇಗನೆ, ಹಂಪಿ ವಿಶ್ವ ಪರಂಪರೆ ಪ್ರದೇಶ ನಿರ್ವಹಣಾ ಪ್ರಾಧಿಕಾರವೆಂದು ಕರೆಯಲಾಗುವ ಒಂದು ಪ್ರಾಧಿಕಾರವನ್ನು ಸ್ಥಾಪಿಸತಕ್ಕದ್ದು.

(2) ಪ್ರಾಧಿಕಾರವು, ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು, ಚರ ಮತ್ತು ಸ್ಥಿರ ಸ್ವತ್ತುಗಳೆರಡನ್ನು ಆರ್ಜಿಸುವ, ಧಾರಣ ಮಾಡುವ, ವಿಲೆ ಮಾಡುವ ಮತ್ತು ಕರಾರು ಮಾಡಿಕೊಳ್ಳುವ ಹಾಗೂ ಸದರಿ ಹೆಸರಿನಿಂದ ದಾವೆ ಹೂಡುವ ಅಥವಾ ದಾವೆಗೊಳಗಾಗುವ ಅಧಿಕಾರವಿರುವ ಮತ್ತು ನಿರಂತರ ಉತ್ತರಾಧಿಕಾರವನ್ನು ಮತ್ತು ಸಾಮಾನ್ಯ ಮೊಹರನ್ನು ಹೊಂದಿರುವ ಮೇಲ್ಕಂಡ ಹೆಸರಿನ ಒಂದು ನಿಗಮಿತ ನಿಕಾಯವಾಗಿರತಕ್ಕದ್ದು.

(3) ಪ್ರಾಧಿಕಾರವು ಈ ಮುಂದಿನ ಸದಸ್ಯರನ್ನು ಒಳಗೊಂಡಿರತಕ್ಕದ್ದು, ಎಂದರೆ:-

(ಎ) ಜಿಲ್ಲಾಧಿಕಾರಿ, ಬಳ್ಳಾರಿ ಜಿಲ್ಲೆ - ಅಧ್ಯಕ್ಷರು

(ಬಿ) ಜಿಲ್ಲಾಧಿಕಾರಿ, ಕೊಪ್ಪಳ ಜಿಲ್ಲೆ - ಉಪಾಧ್ಯಕ್ಷರು

(ಸಿ) ಪುರಾತತ್ವ ಮತ್ತು ವಸ್ತುಸಂಗ್ರಹಾಲಯದ ನಿರ್ದೇಶಕ

(ಡಿ) ಪಟ್ಟಣ ಯೋಜನೆಯ ನಿರ್ದೇಶಕ, ಬೆಂಗಳೂರು

(ಇ) ಪ್ರವಾಸೋದ್ಯಮ ನಿರ್ದೇಶಕ, ಬೆಂಗಳೂರು

(ಎಫ್) ಸೂಪರಿಂಟೆಂಡೆಂಟ್ ಆಫ್ ಪೊಲೀಸ್, ಬಳ್ಳಾರಿ

(ಜಿ) ಸೂಪರಿಂಟೆಂಡೆಂಟ್ ಆಫ್ ಪೊಲೀಸ್, ಕೊಪ್ಪಳ

(ಹೆಚ್) ಅಧೀಕ್ಷಕ ಪುರಾತತ್ವಜ್ಞ, ಭಾರತ ಪುರಾತತ್ವ ಸರ್ವೇಕ್ಷಣೆ, ಬೆಂಗಳೂರು ವೃತ್ತ, ಬೆಂಗಳೂರು.

(ಐ) ಅಧೀಕ್ಷಕ ಪುರಾತತ್ವಜ್ಞ, ಭಾರತ ಪುರಾತತ್ವ ಸರ್ವೇಕ್ಷಣೆ, ಧಾರವಾಡ ವೃತ್ತ, ಧಾರವಾಡ.

(ಜೆ) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಬಳ್ಳಾರಿ

(ಕೆ) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಕೊಪ್ಪಳ

(ಎಲ್) ಅರಣ್ಯ ಉಪ ಸಂರಕ್ಷಕ, ಬಳ್ಳಾರಿ

(ಎಮ್) ಅರಣ್ಯ ಉಪ ಸಂರಕ್ಷಕ, ಕೊಪ್ಪಳ

(ಎನ್) ಆಯುಕ್ತ, ಹೊಸಪೇಟೆ ನಗರಾಭಿವೃದ್ಧಿ ಪ್ರಾಧಿಕಾರ, ಹೊಸಪೇಟೆ

(ಒ) ಸೂಪರಿಂಟೆಂಡಿಂಗ್ ಇಂಜಿನಿಯರ್, ಬಳ್ಳಾರಿ ವೃತ್ತ, ಬಳ್ಳಾರಿ

(ಪಿ) ಉಪ ಪರಿಸರ ಅಧಿಕಾರಿ, ಬಳ್ಳಾರಿ

(ಕ್ಯೂ) ಕಾರ್ಯನಿರ್ವಾಹಕ ಇಂಜಿನಿಯರ್, ನೀರಾವರಿ ಇಲಾಖೆ, ಮುನಿರಾಬಾದ್

(ಆರ್) ಪುರಾತತ್ವ ವಿಭಾಗದ ಮುಖ್ಯಸ್ಥ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ

(ಎಸ್) ಕಾರ್ಯನಿರ್ವಾಹಕ ಅಧಿಕಾರಿ, ಶ್ರೀ ವಿರೂಪಾಕ್ಷೇಶ್ವರ ದೇವಸ್ಥಾನ ಮತ್ತು ಇತರ ಸಂಬAಧಿತ ದೇವಸ್ಥಾನಗಳು, ಹಂಪಿ.

(ಟಿ) ಪ್ರಾಧಿಕಾರದ ಆಯುಕ್ತ, - ಸದಸ್ಯ ಕಾರ್ಯದರ್ಶಿ

**XX XX XX**

**6. ರಾಜ್ಯಮಟ್ಟದ ಸಮಿತಿ.- XX XX XX**

(3) ರಾಜ್ಯಮಟ್ಟದ ಸಮಿತಿಯು, ಅದು ಅವಶ್ಯಕವೆಂದು ಭಾವಿಸಿದರೆ ಪರಂಪರೆ, ಪುರಾತತ್ವ, ಪ್ರವಾಸೋದ್ಯಮ ಅಥವಾ ಪರಿಸರ ಕ್ಷೇತ್ರದಲ್ಲಿ ತಜ್ಞನಾದ ಯಾವೊಬ್ಬ ವ್ಯಕ್ತಿಯನ್ನು ಆಹ್ವಾನಿಸಬಹುದು.

**XX XX XX**

**11. ಪ್ರಾಧಿಕಾರದ ಪ್ರಕಾರ್ಯಗಳು.-** ಈ ಅಧಿನಿಯಮದ ಉಪಬಂಧಗಳಿಗೆ ಮತ್ತು ಅದರ ಅಡಿಯಲ್ಲಿ ರಚಿಸಿದ ನಿಯಮಗಳಿಗೆ ಒಳಪಟ್ಟು, ಈ ಮುಂದಿನವುಗಳು ಪ್ರಾಧಿಕಾರದ ಪ್ರಕಾರ್ಯಗಳಾಗಿರತಕ್ಕದ್ದು ಎಂದರೆ,-

(i) ಪರಂಪರೆ ಪ್ರದೇಶದ ಸಮೀಕ್ಷೆಯನ್ನು ನಡೆಸುವುದು ಮತ್ತು ಹಾಗೆ ನಡೆಸಿದ ಸಮೀಕ್ಷೆಯ ಬಗ್ಗೆ ವರದಿಗಳನ್ನು ತಯಾರಿಸುವುದು;

(ii) ಪರಂಪರೆ ಪ್ರದೇಶದ ಅಭಿವೃದ್ಧಿ ಯೋಜನೆಯನ್ನು ತಯಾರಿಸುವುದು;

(iii)ಅಭಿವೃದ್ಧಿ ಯೋಜನೆಯಲ್ಲಿ ಉದ್ದೇಶಿಸಲಾದ ಅಂಥ ಕಾಮಗಾರಿಗಳನ್ನು ಕೈಗೊಳ್ಳುವಂತೆ ಮಾಡುವುದು;

(iv)ಪರಂಪರೆ ಪ್ರದೇಶದ ಅಭಿವೃದ್ಧಿ ಯೋಜನೆಯನ್ನು ಅನುಷ್ಠಾನಗೊಳಿಸಲು ಅವಶ್ಯವಾಗಬಹುದಾದಷ್ಟು ಸಂಖ್ಯೆಯ ಯೋಜನೆಗಳನ್ನು ರೂಪಿಸುವುದು;

(v) ಅಭಿವೃದ್ಧಿ ಯೋಜನೆಗಳ, ಪಟ್ಟಣ ಯೋಜನಾ ಸ್ಕೀಮುಗಳ ನಿರ್ವಹಣೆಯನ್ನು ಮತ್ತು ಸದರಿ ಯೋಜನೆ ಮತ್ತು ಸ್ಕೀಮುಗಳಿಗೆ ಅನುಸಾರವಾಗಿ ಪರಂಪರೆ ಪ್ರದೇಶದ ಅಭಿವೃದ್ಧಿಯ ನಿರ್ವಹಣೆಯನ್ನು ಸುನಿಶ್ಚಿತಗೊಳಿಸುವುದು ಮತ್ತು ಸಮನ್ವಯಗೊಳಿಸುವುದು;

(vi) ಪರಂಪರೆ ಪ್ರದೇಶದ ಅಭಿವೃದ್ಧಿಗಾಗಿನ ಯಾವುದೇ ಪ್ರಾಜೆಕ್ಟ್ ಅಥವಾ ಸ್ಕೀಮಿಗೆ ಹಣವನ್ನು ಎತ್ತುವುದು ಮತ್ತು ಅಂಥ ಪ್ರಾಜೆಕ್ಟ್ ಅಥವಾ ಸ್ಕೀಮಿನ ನಿರ್ವಹಣೆಗಾಗಿ ಆ ವಲಯದಲ್ಲಿಯ ಸ್ಥಳೀಯ ಪ್ರಾಧಿಕಾರಗಳಿಗೆ ನೆರವು ನೀಡುವುದು;

(vii) ರಾಜ್ಯ ಸರ್ಕಾರವು ವಹಿಸಬಹುದಾದ ಅಥವಾ ಅವಶ್ಯಕವಾಗಬಹುದಾದ ಅಥವಾ ಪ್ರಾಸಂಗಿಕವಾದ ಅಥವಾ ಪ್ರಾಧಿಕಾರವನ್ನು ರಚಿಸಿದ ಉದ್ದೇಶಗಳ ಮುನ್ನಡೆಗೆ ಅವಶ್ಯಕವಾದ ಯಾವುವೆ ವಿಷಯಗಳಿಗೆ ಅನುಕೂಲಕರವಾದ ಅಂಥ ಇತರ ಕಾರ್ಯಗಳು ಮತ್ತು ಕೃತ್ಯಗಳನ್ನು ಮಾಡುವುದು;

(viii) ಯಾವುದೇ ಅಭಿವೃದ್ಧಿ ಯೋಜನೆಯ ಅಥವಾ ಪಟ್ಟಣ ಯೋಜನಾ ಸ್ಕೀಮಿನ ಅಥವಾ ಪರಂಪರೆ ಪ್ರದೇಶದ ಅಭಿವೃದ್ಧಿಯ ನಿರ್ವಹಣಾ ಕಾಮಗಾರಿಯನ್ನು ಯಾವುದೇ ಸ್ಥಳೀಯ ಪ್ರಾಧಿಕಾರಕ್ಕೆ ಅಥವಾ ಏಜೆನ್ಸಿಗೆ ವಹಿಸಿಕೊಡುವುದು;

**XX XX XX**

**23. ಪ್ರಾಧಿಕಾರದಿಂದ ನಿರ್ದೇಶನಗಳು.-** (1) ಪ್ರಾಧಿಕಾರವು, 11ನೇ ಪ್ರಕರಣದ ಅಥವಾ ಯಾವುದೇ ಪಟ್ಟಣ ಯೋಜನೆಯ ಅಡಿಯಲ್ಲಿ ರೂಪಿಸಿದ ಅಭಿವೃದ್ಧಿ ಯೋಜನೆಗಳು ಮತ್ತು ಸ್ಕೀಮುಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ಯಾವುದೇ ಸ್ಥಳೀಯ ಪ್ರಾಧಿಕಾರಕ್ಕೆ, ಸಂಬAಧಪಟ್ಟ ನಗರಾಭಿವೃದ್ಧಿ ಪ್ರಾಧಿಕಾರಕ್ಕೆ, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿ, ಕರ್ನಾಟಕ ವಿದ್ಯುಚ್ಛಕ್ತಿ ಪ್ರಸರಣ ನಿಗಮಕ್ಕೆ ಮತ್ತು ಪರಂಪರೆ ಪ್ರದೇಶದಲ್ಲಿಯ ಅಭಿವೃದ್ಧಿ ಚಟುವಟಿಕೆಗಳಿಗೆ ಸಂಬಂಧಪಟ್ಟ ಅಂಥ ಇತರ ನಿಕಾಯಗಳಿಗೆ ನಿರ್ದೇಶನಗಳನ್ನು ನೀಡಬಹುದು.

**XX XX XX**

**36. ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ 1961ರ ತಿದ್ದುಪಡಿ.- XX XX XX**

(3) 12ನೇ ಪ್ರಕರಣದಲ್ಲಿ, (1)ನೇ ಉಪ ಪ್ರಕರಣದಲ್ಲಿ ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:-

``ಪರಂತು, ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ ಪರಂಪರೆ ಪ್ರದೇಶವನ್ನು ಒಳಗೊಂಡ ಸ್ಥಳೀಯ ಯೋಜನಾ ಪ್ರದೇಶದ ಸಂಬಂಧದಲ್ಲಿ, ಸ್ಥೂಲ ಅಭಿವೃದ್ಧಿ ಯೋಜನೆಯು, 21ನೇ ಪ್ರಕರಣದ (1)ನೇ ಉಪಕಪ್ರಕರಣದ (ಎ) ಯಿಂದ (ಜಿ) ವರೆಗಿನ ಖಂಡಗಳಲ್ಲಿ ನಿರ್ದಿಷ್ಟಪಡಿಸಿದ ವಿವರಗಳನ್ನು ಸಹ ಒಳಗೊಂಡಿರತಕ್ಕದ್ದು ಮತ್ತು ಹಾಗೆ ಸಿದ್ಧಪಡಿಸಲಾದ ಯೋಜನೆಯನ್ನು ಈ ಅಧಿನಿಯಮದ ಉದ್ದೇಶಕ್ಕಾಗಿ ಪರಂಪರೆ ಪ್ರದೇಶದ ಸಂಬAಧದಲ್ಲಿ ಸಮಗ್ರ ಅಭಿವೃದ್ಧಿ ಯೋಜನೆ ಎಂದು ಭಾವಿಸತಕ್ಕದ್ದು ಮತ್ತು 19 ರಿಂದ 23ರ ವರೆಗಿನ ಪ್ರಕರಣಗಳು ಅಂಥ ಭಾವಿತ ಸಮಗ್ರ ಅಭಿವೃದ್ಧಿ ಯೋಜನೆಯನ್ನು ಸಿದ್ಧಪಡಿಸುವುದಕ್ಕೆ ಅನ್ವಯವಾಗಿರತಕ್ಕದ್ದಲ್ಲ''.

**XX XX XX**

**ಅನುಸೂಚಿ**

**(2(ಕ್ಯೂ) ಪ್ರಕರಣವನ್ನು ನೋಡಿ)**

**ಭಾಗ-ಎ**

**ಕೋರ್ ಪ್ರದೇಶ ವಲಯ**

ಅಧಿಸೂಚನೆ ಸಂಖ್ಯೆ: ಐಟಿವೈ 137 ಕೆಎಂವಿ 84 ದಿನಾಂಕ 22Š10Š1988 ರ ಅಡಿಯಲ್ಲಿ ರಕ್ಷಿತ ಪ್ರದೇಶವೆಂಬುದಾಗಿ ರಾಜ್ಯ ಸರ್ಕಾರವು ಅಧಿಸೂಚಿಸಿದ 41.80 ಚ.ಕಿ.ಮೀ. ಪ್ರದೇಶ:Š

**ಭಾಗ - ಬಿ**

**ರಕ್ಷಾ ವಲಯ**

ಕೋರ್ ಪ್ರದೇಶ ವಲಯದ ಪರಿಮಿತಿಗಳಿಂದಾಚೆಗೆ ಎಲ್ಲಾ ಪಕ್ಕಗಳಲ್ಲೂ 1 ಕಿ.ಮೀ ವರೆಗೆ ವಿಸ್ತರಿಸಿದ 53.0 ಚ.ಕಿ.ಮೀ ಪ್ರದೇಶ.

**ಭಾಗ - ಸಿ**

**ಹೊರ ಪ್ರದೇಶ ವಲಯ**

ರಕ್ಷಾ ವಲಯದ ಪರಿಮಿತಿಗಳಿಂದಾಚೆಗೆ ಎಲ್ಲಾ ಕಡೆಗಳಲ್ಲೂ 1 ಕಿ.ಮೀ. ವರೆಗೆ ವಿಸ್ತರಿಸಿದ 31.0 ಚ.ಕಿ.ಮೀ. ಪ್ರದೇಶ.

**XX XX XX**

ಸರ್ಕಾರಿ ಮುದ್ರಣಾಲಯ, ಸುವರ್ಣ ವಿಧಾನಸೌಧ, ಬೆಳಗಾವಿ, ಪಿ7, ಕಾಸೂ , ಪ್ರತಿಗಳು 600, 08ನೇ ಡಿಸೆಂಬರ್ 2023

**KARNATAKA LEGISLATIVE ASSEMBLY**
**SIXTEENTH LEGISLATIVE ASSEMBLY**
**SECOND SESSION**

# THE HAMPI WORLD HERITAGE AREA MANAGEMENT AUTHORITY, (AMENDMENT) BILL, 2023

**(LA Bill No. 27 of 2023)**

A Bill further to amend the Hampi World Heritage Area Management Authority Act, 2002.

Whereas it is expedient further to amend the Hampi World Heritage Area Management Authority Act, 2002 (Karnataka Act 18 of 2003) for the purposes hereinafter appearing;

Be it enacted by the Karnataka State Legislature in the seventy fourth year of the Republic of India as follows:-

**1. Short title and commencement.-** (1) This Act may be called the Hampi World Heritage Area Management Authority (Amendment) Act, 2023.

(2) It shall come into force at once.

**2. Amendment of section 3.-** In the Hampi World Heritage Area Management Authority Act, 2002 (Karnataka Act 18 of 2003), (hereinafter referred to as the Principal Act), in section 3, in sub-section (3),-

(i) in clause (a), for the words "the Deputy Commissioner of Bellary District", the words "The Deputy Commissioner of Vijayanagara District" shall be substituted;

(ii) for clause (c), the following shall be substituted, namely:-

"(c) The Commissioner, Department of Archaeology, Museums and Heritage, Mysuru."

(iii) for clause (f), the following shall be substituted, namely:-

"(f) Superintendent of Police, Vijayanagara District"

(iv) for clause (h), the following shall be substituted, namely:-

"(h) Superintending Archaeologist, Archaeological survey of India, Hampi circle, Kamalapur"

(v) clause (i) shall be omitted;

(vi) for clause (j), the following shall be substituted, namely:-

"(j)The Chief Executive Officer, Zilla Panchayat, Vijayanagara District"

(vii) for clause (l), the following shall be substituted, namely:-

"(l) The Deputy Conservator of Forest, Vijayanagara District"; and

(viii) for clause (p), the following shall be substituted, namely:-

"(p) The Environmental Officer, Vijayanagara District".

**3. Amendment of section 6.-** In section 6 of the Principal Act, in sub-section (3),-

(i) in clause (aa), for the words "The Minister in charge of Bellary District", the words "The Minister in charge of Vijayanagara District" shall be substituted;

(ii) in clause (b), for the words "The Minister in charge of Kannada and Culture", the words "The Minister in charge Urban Development" shall be substituted; and

(iii) in clause (f), for the words "The Secretary to Government, in charge of Kannada and Culture Department", the words "The Secretary to Government, in charge of Urban Development Department" shall be substituted.

**4. Amendment of section 11.-** In section 11 of the Principal Act, in sub-section (1), in clauses (i), (ii), (iii), (iv), (v), and (viii) for the words "Development Plan" wherever they occur the words "Master Plan" shall be substituted.

**5. Amendment of section 23.-** In section 23 of the Principal Act, in sub-section (1), for the words "Development Plan", the words "Master Plan" shall be substituted.

**6. Amendment of section 36.-** In section 36 of the Principal Act, sub-section (3), shall be omitted.

**7. Amendment of Schedule.-** In the Schedule of the Principal Act,-

(i) for Part-B and Part-C the following shall be substituted, namely:-

**“Part-B**

**Buffer Zone**

53.15 sq. km. of area extending upto 1 km beyond the limits of the Core Area Zone on all sides.

**Part-C**

**Peripheral Zone**

141.51 sq.km.of area extending upto 1 km and beyond the limits of the Buffer area Zone on all sides.”

**STATEMENT OF OBJECTS AND REASONS**

A new district by name Vijayanagara District is being formed. Therefore it is considered necessary further to amend the Hampi World Heritage Area Management Authority Act, 2002 (Karnataka Act 18 of 2003).

(i) to facilitate smooth and efficient functioning of the Authority; and

(ii) to carry out the planned developments.

Hence, the Bill.

## FINANCIAL MEMORANDUM

There is no extra expenditure involved in the proposed Legislative measure.

**B. S. SURESH**
Minister for Urban Development

**M.K. VISHALAKSHI**
Secretary
Karnataka Legislative Assembly

# ANNEXURE

## THE EXTRACT FROM THE HAMPI WORLD HERITAGE AREA MANAGEMENT AUTHORITY ACT, 2002 (KARNATAKA ACT 18 OF 2003)

**X X XX XX**

**3. Constitution and Incorporation of the Authority.-** (1) As soon as may be after the appointed day there shall be established for the purposes of this Act, an Authority to be called the Hampi World Heritage Area Management Authority.

(2) The Authority shall be a body corporate by the name aforesaid having perpetual succession and common seal with power subject to the provisions of this Act, to acquire hold and dispose of property both movable and immovable and to contract and shall by the said name sue or be sued.

(3) The Authority shall consist of the following members, namely:-

(a) the Deputy Commissioner, Bellary District - Chairperson

(b) The Deputy Commissioner Koppal District - Vice Chairperson

(c) The Director of Archaelogy and Museums.

(d) The Director of Town Planning, Bangalore.

(e) The Director of Tourism, Bangalore.

(f) Superintendent of Police, Bellary.

(g) Superintendent of Police, Koppal.

(h) The Superintending Archaeologist, Archaeological Survey of India, Bangalore Circle, Bangalore.

(i) The Superintending Archaeologist, Archaeological Survey of India, Dharwad Circle, Dharwad.

(j) The Chief Executive Officer, Zilla Panchayat, Bellary.

(k) The Chief Executive Officer, Zilla Panchayat, Koppal.

(l) The Deputy Conservator of Forests, Bellary.

(m) The Deputy Conservator of Forests, Koppal.

(n) The Commissioner, Hospet Urban Development Authority, Hospet.

(o) The Superintendent Engineer, Bellary Circle, Bellary.

(p) The Deputy Environment Officer, Bellary.

(q) The Executive Engineer, Irrigation Department, Munirabad.

(r) Head of the Department of Archaeology, Kannada University, Hampi.

(s) The Executive Officer, Sri Virupakshewara Temple and other allied temples, Hampi.

(t) The Commissioner of the Authority - Member Secretary.

**X X XX XX**

**6. State Level Committee.- X X XX XX**

(3) The State Level Committee may if it deems necessary invite any person who is an expert in the field of Heritage, archaeology, Tourism or Environment.

**X X XX XX**

**11. Functions of the Authority.-** (1) Subject to the provisions of this Act and the rules made thereunder the functions of the Authority shall be,-

(i) to carry out a survey of the Heritage Area and prepare reports on the surveys so carried out;

(ii) to prepare development plan of the Heritage area;

(iii) to cause to be carried out such works as are contemplated in the development plan;

(iv) to formulate as many schemes as are necessary for implementing the development plan of the Heritage Area;

(v) to secure and co-ordinate execution of the development plan, town planning schemes and the development of the Heritage Area in accordance with the said plan and schemes;

(vi) to raise finance for any project or scheme for the development of the Heritage Area and to extend assistance to the local authorities in the Region for the execution of such project or scheme;

(vii) to do such other acts and things as may be entrusted by the State Government or as may be necessary for or incidental or conducive to, any matters which are necessary for furtherance of the objects for which the Authority is constituted;

(viii) to entrust to any local authority or other agency the work of execution of any development plan or town planning scheme or development of the Heritage area;

**X X XX XX**

**23. Directions by the Authority.-** (1) The Authority may, in order to carry out the development plans and schemes formulated under section 11 or any town planning scheme issue directions to any local Authority, Urban development

Authority concerned, Karnataka Urban Water Supply and Sewerage Board, Karnataka Power Transmission Corporation and such other bodies as are connected with developmental activities in the Heritage Area.

**X X XX XX**

**36. Amendment of Karnataka Town and Country Planning act, 1961.-**

**X X XX XX**

(3) in section 12, in sub-section (1) the following proviso shall be inserted, namely:- "Provided that notwithstanding anything contained in this Act in the case of the local planning area comprising the heritage area the outline development plan shall also contain the particulars specified in clauses (a) to (g) of sub-section (1) of section 21 and the plan so prepared shall for the purpose of this Act be deemed to be the comprehensive development plan in respect of the heritage area and sections 19 to 23 shall not apply for preparation of such deemed comprehensive development plan."

**X X XX XX**

**SCHEDULE**
**(see section 2 (q)**
**Part-A**
**Core Area Zone**

Area of 41.80 sq.km. notified by the State Government as protected area under notification No.ITY 137 KMV 84, dated 22.10.1988.

**Part-B**
**Buffer Zone**

53.0 sq. km. of area extending upto 1 km. beyond the limits of the Core Area Zone on all sides.

**Part-C**
**Peripheral Zone**

31.0 sq.km. of area extending upto 1 km. beyond the limits of the Buffer Zone on all sides.

**X X XX XX**

Govt. Press, Suvarna Vidhana Soudha, Belgavi, 08TH Dec, 2023, P7, W.D. , Copies 500